## ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

### ಸೋಲು, ಗೆಲುವು ಇದ್ದದ್ದೇ

12ನೇ ಆವೃತ್ತಿಯ ಐಸಿಸಿ ವಿಶ್ವಕಪ್‌ನಲ್ಲಿ ಸೆಮಿ ಫೈನಲ್‌ನಲ್ಲಿ ಭಾರತ ತಂಡ ನ್ಯೂಜಿಲೆಂಡ್ ಎದುರು 18 ರನ್‌ಗಳಿಂದ ಸೋಲನುಭವಿಸಿತು. ದೇಶದ ಕೋಟ್ಯಂತರ ಜನರ ಶುಭ ಹಾರೈಕೆ ನಡುವೆಯೂ ಭಾರತ ಸೋತದ್ದು ದೇಶವಾಸಿಗಳ ಪಾಲಿಗೆ ನಿರಾಸೆಯ ಕ್ಷಣವಾಗಿದೆ. ಈ ಬಾರಿ ವಿಶ್ವಕಪ್ ಗೆಲ್ಲುವ ತಂಡ ಭಾರತ ಎಂಬುದು ಅಸಂಖ್ಯಾತ ಜನರ ನಿರೀಕ್ಷೆಯಾಗಿತ್ತು. ಅದಕ್ಕೆ ತಕ್ಕಂತೆ ಟೀಂ ಇಂಡಿಯಾ ಗೆಲುವಿನ ಓಟವೂ ಸಾಗಿತ್ತು. ಇಡೀ ಟೂರ್ನಿಯಲ್ಲಿ ಇಂಗ್ಲೆಂಡ್ ವಿರುದ್ಧ ಒಂದು ಪಂದ್ಯ ಸೋತಿದ್ದು ಬಿಟ್ಟರೆ ಮತ್ತೆಲ್ಲೂ ತನ್ನ ಗೆಲುವನ್ನು ಬಿಟ್ಟುಕೊಟ್ಟಿರಲಿಲ್ಲ. ಆದರೆ ಈ ಸೋಲು ಇನ್ನೇನು ಗುರಿ ತಲುಪಲು ಕೆಲವೇ ಹೆಜ್ಜೆಗಳು ಬಾಕಿ ಇವೆ, ಭಾರತೀಯರ ಕನಸು ನನಸಾಗಲು ಇನ್ನು ಕೆಲವೇ ಕ್ಷಣಗಳು ಉಳಿದಿವೆ ಅನ್ನುವ ಕ್ಷಣದಲ್ಲೇ ಕೋಟ್ಯಂತರ ಭಾರತೀಯರ ವಿಶ್ವಕಪ್ ಆಸೆಯೂ ಭಗ್ನವಾಯಿತು. ದೇಶದಲ್ಲೆಡೆ ಈ ಬಗ್ಗೆ ಬೇಸರವಾಗಿದೆ. ಒಬ್ಬೊಬ್ಬರೂ ಒಂದೊಂದು ರೀತಿ ಪ್ರತಿಕ್ರಿಯೆ ನೀಡುತ್ತಿದ್ದಾರೆ. ಆದರೆ ಸೋತ ತಕ್ಷಣ ತಂಡವನ್ನು ದೂರುವುದು ಸರಿಯಲ್ಲ. ಗೆದ್ದಾಗ ಹೊಗಳಿ, ಸೋತಾಗ ವ್ಯಂಗ್ಯವಾಡುವುದು ಕೂಡ ಸರಿಯಲ್ಲ. ಸೋತಾಗ ತಂಡಕ್ಕೆ ಇಡೀ ದೇಶ ಬೆಂಬಲವಾಗಿ ನಿಂತು ಆತ್ಮವಿಶ್ವಾಸ ತುಂಬುವ ಕೆಲಸ ಮಾಡಬೇಕಾಗಿದೆ. ಇದರಿಂದಾಗಿ ಮುಂದಿನ ಪಂದ್ಯದಲ್ಲಿ ಭಾರತ ತಂಡಕ್ಕೆ ಇನ್ನಷ್ಟು ಹುರುಪು ಸಿಗಲಿದೆ. ಪಂದ್ಯಎಂದರೆ ಸೋಲು ಗೆಲುವು ಇದ್ದದ್ದೆ. ಗೆಲುವಿನ ಗುರಿಯನ್ನು ಬೆನ್ನತ್ತಿ, ಸೆಣಸಿ, ದೇಶದ ಕೀರ್ತಿಯನ್ನು ಹೆಚ್ಚಿಸಿದ್ದ ಎಲ್ಲಾ ಆಟಗಾರರಿಗೂ ನಮ್ಮದೊಂದು ಸಲಾಂ. ಭಾರತ ತಂಡದ ಬಗ್ಗೆ ನಮಗೆ ಹೆಮ್ಮೆ ಇದೆ.

**-ದಿವ್ಯಶ್ರೀ ವಿ.**, ಬೆಂಗಳೂರು

### ಸುದ್ದಿ ಮಾಧ್ಯಮಗಳಿಗೇನಾಗಿದೆ?

ಮಾಧ್ಯಮಗಳು ಇಂದು ರಾಜಕೀಯ ಬಿಟ್ಟು ಉಳಿದ ಕ್ಷೇತ್ರದ ಕಡೆಗೆ ತಲೆಯೆತ್ತಿ ನೋಡುತ್ತಿಲ್ಲ. ಅಲ್ಲಿ ಆಗುವ ಬೆಳವಣಿಗೆಗಳ ಬಗ್ಗೆ ಗಮನಿಸುತ್ತಿಲ್ಲ. ಸುದ್ದಿ ಎಂದರೆ ಕೇವಲ ರಾಜಕೀಯ ವಿಷಯ ಎಂದಷ್ಟೇ ಭಾವಿಸಿದಂತಿದೆ. ತಮಗೆ ಅಧಿಕಾರ ಸಿಗಲಿಲ್ಲವೆಂದು, ಕೇಳಿದ ಖಾತೆ ಕೊಡಲಿಲ್ಲವೆಂದು, ತಮ್ಮನ್ನು ನಿರ್ಲಕ್ಷಿಸಿದರೆಂದು ಸರಕಾರದ ವಿರುದ್ಧ ತಿರುಗಿಬಿದ್ದಿರುವ ಅತೃಪ್ತ ಶಾಸಕರ ರಾಜೀನಾಮೆ ಪ್ರಹಸನ. ಕಳೆದವಾರದಿಂದ ಹಗಲು ರಾತ್ರಿ ಎಲ್ಲ ಸುದ್ದಿವಾಹಿನಿಗಳು ಪೈಪೋಟಿಗೆ ಬಿದ್ದು ಇದೇ ತೋರಿಸುತ್ತಿವೆ. ಕ್ರೀಡೆ, ಶೈಕ್ಷಣಿಕ, ಸಾಮಾಜಿಕ ಸಮಸ್ಯೆ, ಸಾಧನೆ ಇವ್ಯಾವುಗಳನ್ನು ಸುದ್ದಿವಾಹಿನಿಗಳು ಬಿತ್ತರಿಸುತ್ತಿಲ್ಲ.

ಅತೃಪ್ತರು ವಾಸಿಸುವ ಹೊಟೇಲ್, ಅವರ ಯಾವಾಗ ಎದ್ದರು, ವಾಕಿಂಗ್ ಯಾವಾಗ ಮಾಡಿದರು, ಊಟ-ತಿಂಡಿ ಯಾವಾಗ ಮಾಡಿದರು, ಅವರು ಯಾವ ಬಸ್ಸಿನಲ್ಲಿ ವಿಧಾನಸೌಧಕ್ಕೆ ಬರುತ್ತಿದ್ದಾರೆ. ಬಸ್ ನಂಬರ್ ಏನು? ಅದರ ಮಾಲೀಕರಾರು? ಹೀಗೆ ಬಸ್‌ಗೆ ಬೆನ್ನತ್ತಿರುವುದರ ನಡುವೆಯೇ ನಮ್ಮ ಒಬ್ಬ ಕ್ರೀಡಾಪಟು ವಿದೇಶದಲ್ಲಿ ಓಟದಲ್ಲಿ ಚಿನ್ನ ಗೆದ್ದಿದ್ದು ಸುದ್ದಿ ಆಗಲೇ ಇಲ್ಲ. 23 ವಯಸ್ಸಿನ ದ್ಯುತಿ 100 ಮೀಟರ್ ಓಟದ ಸ್ಪರ್ಧೆಯಲ್ಲಿ ಆರಂಭದಿಂದ ಅಂತ್ಯದವರೆಗೂ ಮುನ್ನಡೆ ಸಾಧಿಸಿ 11.32 ಸೆಕೆಂಡ್‌ಗಳಲ್ಲಿ ಮೊದಲಿಗರಾಗಿ ಗೆಲುವಿನ ಗೆರೆ ದಾಟಿದಳು. ಅಲ್ಲದೇ, ಒಡಿಸ್ಸಾದ ಓಟಗಾರ್ತಿ 11.24 ಸೆಕೆಂಡ್‌ಗಳಲ್ಲಿ ರಾಷ್ಟ್ರೀಯ ದಾಖಲೆ ಸೃಷ್ಟಿಸಿದ್ದಾರೆ. ಈ ಸಾಧನೆಯಿಂದಾಗಿ ಜಾಗತಿಕ ಸ್ಪರ್ಧೆಯ 199ಮೀಟರ್ ಓಟದಲ್ಲಿ ಸ್ವರ್ಣ ಸಾಧನೆ ಮಾಡಿದ ಭಾರತದ ಪ್ರಥಮ ಪಟು ಎಂಬ ಕೀರ್ತಿಗೂ ಪಾತ್ರರಾದರು. ಸುದ್ದಿ ಮಾಧ್ಯಮಗಳಿಗೆ ರಾಜಕೀಯ ಸುದ್ದಿಗಳಷ್ಟೇ ಸುದ್ದಿಯಲ್ಲ ಎಂದು ಜನರಿಂದಲೇ ಬುದ್ಧಿ ಹೇಳಿಸಿಕೊಳ್ಳುವ ಸ್ಥಿತಿಗೆ ಮಾಧ್ಯಮಗಳು ಮೌಲ್ಯ ಕಳೆದುಕೊಂಡಿರುವುದು ದುರದೃಷ್ಟಕರ.

**-ಭಾರತಿ ಪಾಟೀಲ**, ನಾಗಡದಿನ್ನಿ

## ಭಟ್ಟರ್ ಸ್ನಾಕ್

- **ರಾಘಣ್ಣ ಕೃಷ್ಣಮೂರ್ತಿ ಪುರಂ**, ಮೈಸೂರು
  ಇಸ್ರೇಲ್ 'ಗುಂಗಿ'ನಲ್ಲಿದ್ದ ನಿಮಗೆ ಪ್ರಶ್ನೆಗಳಿಗೆ ಉತ್ತರವೇ ಹೊಳೆಯುತ್ತಿರಲಿಲ್ಲವಂತೆ ನಿಜವೇ?
  **- ಅದು ಸದಾ ಬಿತ್ತನೆ ಕೃಷಿಯಲ್ಲಿ ತೊಡಗಿರುವವರ ಹಳವಂಡ!**
- **ಮೋಹನ ಕಾರ್ತೀಕ**, ಜೆ.ಪಿ.ನಗರ
  ಭಟ್ರೇ, ಇಸ್ರೇಲಿನಲ್ಲಿ ನೀವು ಮನೆ ಮಾಡಿದ್ದೀರಂತೆ ಹೌದಾ?
  **- ಗುರು, ಇಸ್ರೇಲೇ ನನ್ನೊಳಗೆ ಮನೆ ಮಾಡಿದೆ!**
- **ಪವಮಾನ ಆಚಾರ್ಯ**, ವಿದ್ಯಾಪೀಠ
  ಭಟ್ರೇ, ನೀವೇಕೆ ನಿಮ್ಮದೇ ಯೂ ಟ್ಯೂಬ್ ಚಾನೆಲ್ ಆರಂಭ ಮಾಡಬಾರದು?
  **- ಬರೆಯುವ ಪತ್ರಕರ್ತ ಮಾತಾಡಲಾರಂಭಿಸಿದರೆ, ಸರಕು ಖಾಲಿಯಾಗಿ ಬಡಬಡಿಸಲಾರಂಭಿಸಿದ್ದಾನೆ ಎಂದರ್ಥ!**
- **ಬಾಲಚಂದ್ರ ಕುಲಕರ್ಣಿ**, ಬೆಳಗಾವಿ
  ನೀವು ಸ್ಪೀಕರ್ ಸ್ಥಾನದಲ್ಲಿ ಇದ್ದಿದ್ರೆ ಏನು ಮಾಡ್ತಾ ಇದ್ರಿ?
  **- ನಾನೇ ಮೊದಲು ರಾಜೀನಾಮೆ ಕೊಟ್ಟು ಮುಂಬೈಗೆ ಹೋಗುತ್ತಿದ್ದೆ!**
- **ಪೂರ್ಣಿಮಾ ಶಂಕರ**, ಜಯನಗರ
  ಭಟ್ರೇ, ಶಾಸಕರಾಗುವುದರ ಪ್ರಯೋಜನವೇನು?
  **- ಯಾರದ್ದೋ ದುಡ್ಡಲ್ಲಿ ರೆಸಾರ್ಟ್ ಅಥವಾ ಪಂಚತಾರಾ ಹೋಟೆಲಿನಲ್ಲಿ ಉಳಿದುಕೊಂಡು ಮಜಾ ಮಾಡಬಹುದು!**
- **ಮಧುಸೂದನ ಕೆ.ಸಿ.**, ಬಳ್ಳಾರಿ
  ಒಬ್ಬರಾದ ನಂತರ ಒಬ್ಬ ಶಾಸಕರು ರಾಜೀನಾಮೆ ಕೊಡುತ್ತಿದ್ದರೂ ಮುಖ್ಯಮಂತ್ರಿ ಮಾತ್ರ ರಾಜೀನಾಮೆ ಕೊಡದಿರುವುದೇಕೆ?
  **- ಅವರಿಗೆ ಅವಸರವಸರದಲ್ಲಿ ಫೈಲ್ ಕ್ಲಿಯರ್ ಮಾಡಬೇಕಾದ ಕೆಲಸ ಇರುವಾಗ ರಾಜೀನಾಮೆ ಕೊಡಲು ಪುರುಸೊತ್ತಿಲ್ಲ!**
- **ಪ್ರವೀಣ ಸೂರಿ**, ಬಿಟಿಎಂ ಲೇಔಟ್
  ಭಟ್ರೇ, ಇತ್ತೀಚಿನ ದಿನಗಳಲ್ಲಿ ರೆಗ್ಯುಲರ್ ಆಗಿ ಭಟ್ಟರ ಸ್ನಾಕ್ ಪ್ರಕಟವಾಗುತ್ತಿಲ್ಲ ಏಕೆ?
  **- ಅಲ್ಲಿ ತನಕ ನೀನು ಮೊಯಿಲಿ ಮಹಾಕಾವ್ಯ ಓದಿಕೊಂಡಿರಲಿ ಅಂತ!**
- **ವಿಜಯಶಂಕರ ಸುತಮಾಡಿ**, ಮೈಸೂರು
  ಹೋದ ಪುಟ್ಟ ಬಂದ ಪುಟ್ಟ ಎಂಬ ಗಾದೆಗೆ ತಾಜಾ ಉದಾಹರಣೆ ಯಾವುದು?
  **- ಡಿಕೆಶಿ ಮುಂಬೈಗೆ ಹೋಗಿ ಬಂದಿದ್ದು!**
- **ರಾಮಮೂರ್ತಿ ಶೆಟ್ಟಿ**, ಉಡುಪಿ
  ನಮ್ಮ ರಾಜಕಾರಣಿಗಳನ್ನು ನೋಡಿದರೆ ನನಗೆ ವಾಕರಿಕೆ ಬರುವುದೇಕೆ ಭಟ್ರೇ?
  **- ನನಗೆ ಅವರನ್ನು ಆರಿಸಿದ ಮತದಾರರನ್ನು ನೋಡಿದರೆ ಹಾಗೆ ಅನಿಸುವುದೇಕೆ?!**
- **ಗಣೇಶ ಮುಂಜಾವು**, ಬೆಂಗಳೂರು
  ಆರಿಸಿ ಬಂದ ಶಾಸಕರು ರಾಜೀನಾಮೆ ಕೊಡುವಾಗ ನಾಯಕರಿಗೆ ಬೇಸರವಾಗುವುದಿಲ್ಲವಾ ಸಾರ್?
  **- ರಾಜೀನಾಮೆ ಕೊಡಿ ಅಂತ ನಾಯಕರೇ ಹೇಳಿದರೆ ಆ ಶಾಸಕರಾದರೂ ಏನು ಮಾಡ್ತಾರೆ?!**

# ಈ ನಾಟಕಕ್ಕೆ ಇಷ್ಟು ದೊಡ್ಡ ರಿಹರ್ಸಲ್ ಬೇಕಿತ್ತೇ?

**ವಿಶ್ಲೇಷಣೆ**



**ಟಿ. ದೇವಿದಾಸ್**

vveditoped@gmail.com

ಎಲ್ಲಾ ರಾಜ್ಯಗಳಂತೆ ನಮ್ಮ ರಾಜ್ಯಕ್ಕೂ ಒಂದು ಸರಕಾರ ಇದೆಯೆಂದು ಗೊತ್ತಾಗಿದ್ದೇ ಸರಕಾರ ಬೀಳುವ ಅವಸ್ಥೆಯನ್ನು ತಲುಪಿದೆಯೆಂದು ಮಾಧ್ಯಮಗಳಲ್ಲಿ ಬಿತ್ತರವಾಗುತ್ತಿರುವ ನಿರಂತರವಾದ ಸುದ್ದಿಯನ್ನು ನೋಡಿದಾಗ, ಓದಿದಾಗ. ಈ ಮಾತು ವಿಚಿತ್ರ ಅನಿಸಬಹುದು. ಆದರೆ ಸತ್ಯವಂತೂ ಹೌದು. ಈ ಸಂದರ್ಭದಲ್ಲಿ ಒಂದು ನೆನಪಿಗೆ ಬರುತ್ತಿದೆ: ಕೆಲವರಿರುತ್ತಾರೆ. ಅವರು ಇದ್ದಾರೆಂಬುದು ಗೊತ್ತಾಗುವುದು ಅವರು ಸತ್ತ ಸುದ್ದಿ ನಾಲ್ಕು ಜನರ ಬಾಯಲ್ಲಿ ಕೇಳಿದಾಗ. ನನ್ನ ಈ ಮಾತಿಗೂ ನಮ್ಮ ರಾಜ್ಯ ಸರಕಾರ ಬೀಳುವ ಹಂತಕ್ಕೆ ತಲುಪುತ್ತಿದೆಯೆಂಬ ಸುದ್ದಿ ಜೋರು ಪ್ರಚಾರದಲ್ಲಿರುವ ಈ ಹೊತ್ತಿಗೂ ಯಾವ ಸಂಬಂಧವೂ ಇಲ್ಲ. ಯಾಕೋ ನೆನಪಾಯಿತು, ಅದಕ್ಕಾಗಿ ಹೇಳಿದೆಯಷ್ಟೆ. ಇದೆಯೆಂದರೆ ಇದೆ, ಇಲ್ಲವೆಂದರೆ ಇಲ್ಲ ಎಂದು ತಿಳಿಯಬಹುದಾದ ಈ ಸರಕಾರವು ಅಷ್ಟು ಬೇಗ ಪತನವಾಗಲಾರದು. ಯಾಕೆಂದರೆ, ಮೊದಲಿಂದಲೂ ಇದ್ದ ರೋಗವು ಈಗ ಉಲ್ಬಣಗೊಂಡಿದೆಯಷ್ಟೆ. ಅದನ್ನು ವಾಸಿಮಾಡುವ ಅಥವಾ ಉಳಿಸುವ ಅಥವಾ ಬದುಕಿಸುವ ಏನು ಬೇಕಾದರೂ ಹೇಳಿ, ಅಂಥ ದೊಡ್ಡ ಪ್ರಯತ್ನಕ್ಕೆ ದೊಡ್ಡ ದೊಡ್ಡ ವೈದ್ಯರು, ಸರ್ಜನರು, ವಿಶೇಷ ತಜ್ಞರು ಆಪರೇಷನ್ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದಾರೆ. ಏನೇ ಆದರೂ ರೋಗಿ ಅಥವಾ ಹಿಡಿದ ರೋಗ ಸ್ವಲ್ಪಮಟ್ಟಿಗಾದರೂ ಗುಣಮುಖವಾಗಲೇಬೇಕು ಎಂಬ ಹಠಕ್ಕೆ ಛಲಕ್ಕೆ ಬಿದ್ದಿದ್ದಾರೆ. Of course ಈ ಪ್ರಯತ್ನದಲ್ಲಿ ಅವರು ಸಫಲರೂ ಆಗಬಹುದು, ವಿಫಲರೂ ಆಗಬಹುದು. ಆದರೆ ಇದರಿಂದ ತೊಂದರೆ ಆಗುವುದು ಮಾತ್ರ ಜನರಿಗೆ.

ಯಾಕೆಂದರೆ, ವರುಷದ ಹಿಂದೆಯಷ್ಟೇ ಚುನಾವಣೆಯಾಗಿದೆ. ಈಗ ಮತ್ತೆ ಚುನಾವಣೆ ಆಗುವುದು ಯಾರಿಗೂ ಇಷ್ಟವಿಲ್ಲ. ಅಷ್ಟು ಪ್ರಮಾಣದ ಖರ್ಚು ಮಾಡಿ (ಆ ಖರ್ಚನ್ನು ಯಾರು ಭರಿಸುತ್ತಾರೆಂಬುದು ಮುಖ್ಯ) ಚುನಾವಣೆ ನಡೆಸಿಯೂ ಮತ್ತೆ ಯಾವ ಪಕ್ಷಕ್ಕೂ ಬಹುಮತ ಬಾರದೇ ಸಮ್ಮಿಶ್ರವೇ ಮತ್ತೆ ರಚನೆ ಮಾಡಿಕೊಳ್ಳುವ ಹಂತಕ್ಕೆ ಎಲ್ಲಾ ಅಧಿಕಾರ ದಾಹ ಮತ್ತು ಸಾಂವಿಧಾನಿಕ ಸ್ಥಾನ ಮರ್ಯಾದೆಯನ್ನು ಕಳೆವ ಮೂರ್ಖ ರಾಜಕಾರಣಿಗಳು ಇಳಿದರೆ? ಇವರ್ಯಾರೂ ಅಂಥದ್ದಕ್ಕೆ ಇಳಿಯುವುದಿಲ್ಲ ಅಂತ ಯಾವ ನಂಬಿಕೆಯನ್ನೂ ಇವರು ಈ ಒಂದು ವರ್ಷದಲ್ಲಿ ಉಳಿಸಿಕೊಳ್ಳಲಿಲ್ಲ. ಈಗಿರುವ ಸಮ್ಮಿಶ್ರ ಸರಕಾರವೇ ಜನತೆಯಲ್ಲಿ ತನ್ನ ಬಗೆಗೆ ಹುಟ್ಟಿಸಿಕೊಳ್ಳಬೇಕಾದ ನಂಬಿಕೆಯನ್ನೂ ಕಳೆದುಕೊಂಡಿದೆ. ಮತ್ತೊಂದು ಇಂಥದ್ದೇ ಸಮ್ಮಿಶ್ರ ಸರಕಾರ ಬಂದರೆ ರಾಜಕಾರಣದ ಮೇಲೆ ಇರುವ ಅಲ್ಪಸ್ವಲ್ಪ ನಂಬಿಕೆ, ಗೌರವವೂ ಕಿಂಚಿತ್ ಉಳಿಯದೇ ಹೋದೀತು!

ಪ್ರಬಲ ಹಿಂದುತ್ವವಾದಿ ಪಕ್ಷವಾದ ಬಿಜೆಪಿಯೂ ಅಧಿಕಾರಕ್ಕೆ ಬರಬಾರದು ಎಂಬ ದುರುದ್ದೇಶಪೂರಿತ, ಮೋದಿಯ ವರ್ಚಸ್ಸು ಉಚ್ಛ್ರಾಯ ಸ್ಥಿತಿಯಲ್ಲಿರುವ ಈ ಕಾಲದಲ್ಲಿ ಮುಂಬರುವ ಲೋಕಚುನಾವಣೆಗೆ ಅನುಕೂಲವಾಗಲೆಂಬ ಕಣಿಕ ನೀತಿಯ ರಾಜಕೀಯ ಅನುಸರಣೆಯ ಫಲವಾಗಿ, ಚುನಾವಣಾ ಪೂರ್ವದಲ್ಲಿ ಕಿತ್ತಾಡಿಕೊಂಡ, ಕಾಲುಕೆರೆದು ಜಗಳವನ್ನೂ ಮಾಡಿಕೊಂಡ ಎರಡೂ ಪಕ್ಷಗಳು ಏನೇನೋ ರಾಜಕೀಯ ತಂತ್ರಗಳನ್ನು ಹೆಣೆದು ಅಧಿಕಾರವನ್ನು ಹಿಡಿದ ಅಂದಿನಿಂದಲೇ ತಮ್ಮ ಪಕ್ಷದೊಳಗೆ ವಿರಸ, ವೈಮನಸ್ಸು ಹುಟ್ಟಿಕೊಳ್ಳುವಂತೆ ಸೃಷ್ಟಿಸಿಕೊಂಡಿದ್ದವು. ಆದರೂ ಸಮ್ಮಿಶ್ರ ಸರಕಾರ ಬೇಕಿತ್ತು. ರಾಜ್ಯವೊಂದರ ಸ್ವಾಸ್ಥ್ಯಕ್ಕಿಂತಲೂ ತಮ್ಮ ಪಕ್ಷದ ಸ್ವಾಸ್ಥ್ಯವೇ ಮುಖ್ಯವೆಂದು ಮೈತ್ರಿಗೆ ಬೆನ್ನುಕೊಟ್ಟು ನಿಲ್ಲುವಂತೆ ಕಾಂಗ್ರೆಸ್ ಹೈಕಮಾಂಡ್ ಆದೇಶವೂ ಇತ್ತು. ಇದಕ್ಕೆಲ್ಲಾ ತಾರ್ಕಿಕ ಕಾರಣಗಳೇನು ಎಂಬುದನ್ನು ಅರಿಯಲಾರದಷ್ಟು ದಡ್ಡರೂ ಈಗ ಇರಲಾರರು. ಕೇವಲ ಪಕ್ಷದ ಉಳಿವಿನ ಪ್ರಶ್ನೆ ಬಿಟ್ಟರೆ ಬೇರೆ ಯಾವುದೂ ಈಗಿರುವ ಸಮ್ಮಿಶ್ರ ಸರಕಾರದ ರಚನೆಯ ಮೂಲೋದ್ದೇಶವಾಗಿ ಕಾಣಿಸಲೇ ಇಲ್ಲ. ಯಾವ ಪುರುಷಾರ್ಥಕ್ಕೆ ರಚನೆಯಾಗಿದೆ, ಅದರ ಧ್ಯೇಯಾದ್ಯತೆಗಳೇನು ಎಂಬುದೇ ವರ್ಷ ಕಳೆದರೂ ಸರಕಾರದಲ್ಲಿದ್ದವರಿಗೇ ಇನ್ನೂ ಅರ್ಥವಾಗದೇ ಇರುವಾಗ ಮತ್ತೊಮ್ಮೆ ಚುನಾವಣೆ ಆಗಿ ಮತ್ತೆ ಸಮ್ಮಿಶ್ರ ಸರಕಾರ ರಚನೆಯಾಗುವ ದುರಂತಮಯ ದುಸ್ಥಿತಿ ಕರ್ನಾಟಕಕ್ಕೆ ಬಾರದಿರಲಿ ಎಂಬುದೇ ಎಲ್ಲರೂ ದೇವರಲ್ಲಿಟ್ಟ ಪ್ರಾರ್ಥನೆ. ಹಾಗಂತ ಈ ಡೋಲಾಯಮಾನ ಸ್ಥಿತಿಯಲ್ಲಿರುವ ಸರಕಾರವೂ ಖಂಡಿತವಾಗಿಯೂ ಬೇಡ.

ದಿನಬೆಳಗಾದರೆ ಇವರದ್ದೇ ಸುದ್ದಿ. ಆ ಮಂತ್ರಿ ಹಾಗೆ ಮಾಡಿದ, ಈ ಮಂತ್ರಿ ಹೀಗೆ ಮಾಡಿದ, ಅವರೊಂದಿಷ್ಟು ಶಾಸಕರು ರಾಜೀನಾಮೆ ನೀಡಿ ಅದೆಲ್ಲಿಗೋ ಅಜ್ಞಾತವಾಸಕ್ಕೆ ಹೋಗಿ ಸರಕಾರ ಬೀಳಿಸುತ್ತೇವೆಂದು ಹೆದರಿಸುತ್ತಿದ್ದಾರೆಂಬ ಸುದ್ದಿ, ಒಂದೇ ಎರಡೇ ನಿರಂತರವಾಗಿ ಇದೊಂದೇ ನಾಟಕದ ದೃಶ್ಯಗಳು ಮಾಧ್ಯಮಗಳಲ್ಲಿ ಬ್ರೇಕಿಂಗ್ ನ್ಯೂಸ್ ಗಳಾಗಿ ಪ್ರಸಾರವಾಗುತ್ತಿವೆ. ಮತಿಗೆಟ್ಟ ಕುಹಕಿ ರಾಜಕಾರಣಿಗಳಿಂದ ಹೊಲಸು ಅಧಿಕಾರ ರಾಜಕೀಯದ ಕುದುರೆ ವ್ಯಾಪಾರ ಎಂಬ ದಂಧೆ ಬೇರೆ! ಮೂರೂ ಪಕ್ಷಗಳಲ್ಲಿರುವ ಹೆಚ್ಚಿನ ರಾಜಕಾರಣಿಗಳಿಗೆ ನೈಜ ರಾಜಕಾರಣದ ಎಥಿಕ್ಸೇ ಇಲ್ಲ, ನೈತಿಕತೆಯೇ ಇಲ್ಲ, ತನ್ನನ್ನು ಆರಿಸಿ ಕಳಿಸಿದವರ ಬಗ್ಗೆ ಲೇಶಮಾತ್ರದ ದರಕರವೂ ಇಲ್ಲ, ಎಲ್ಲರಿಗೂ ಇರುವುದು ಅಧಿಕಾರದ ದಾಹವೊಂದೇ! ವಿದೇಶಕ್ಕೆ ಹೋದ ಮುಖ್ಯಮಂತ್ರಿಗಳು ಸರಕಾರ ಬಿದ್ದೇ ಬಿಟ್ಟಿತೇನೋ ಎಂಬ ಆತಂಕದಲ್ಲಿ ಹಾರಿಬಂದದ್ದು ಕೂಡ ಇದೇ ದಾಹದಿಂದಲೇ! ಇದೇ ಆತಂಕ ನಾಡು ನುಡಿ ಜನರ ಬಗ್ಗೆ ಇದ್ದಿದ್ದರೆ ಕರ್ನಾಟಕದ ಅಭಿವೃದ್ಧಿ ಇನ್ನೂ ಹೆಚ್ಚಾಗಿ ಅಥವಾ ಆರ್ಥಿಕ ಅಸಮಾನತೆ ಕಡಿಮೆಯಾಗಿ ಅಂದುಕೊಂಡದ್ದನ್ನು ಬಜೆಟುಗಳ ಮೂಲಕ ಸಾಧಿಸಬಹುದಿತ್ತು. ಸರಕಾರಕ್ಕೆ ಉಳಿವಿಗೆ ಸಂಬಂಧಿಸದ ಅಥವಾ ವೈಯಕ್ತಿಕವಲ್ಲದ ಬೇರೆ ಯಾವುದೇ ಗಂಭೀರವಾದ ಘಟನೆ ರಾಜ್ಯದಲ್ಲಿ ನಡೆದಿದ್ದರೆ ಮುಖ್ಯಮಂತ್ರಿಗಳು ಅದೇ ಶರವೇಗದಲ್ಲಿ ಬೆಂಗಳೂರಿಗೆ ಬರುತ್ತಿದ್ದರೆ?! ಮುಖ್ಯಮಂತ್ರಿಯೋ ಯಾ ಯಾವುದೇ ಮಂತ್ರಿಗಳಿಗಾದರೂ ಇಷ್ಟು ಪ್ರಮಾಣದ ಆತಂಕ ಕಾಳಜಿ ಎಲ್ಲಾ ಸಂದರ್ಭಕ್ಕೂ ಇರಬೇಕು. ಇರಬೇಕಿತ್ತು. ಆದರೆ ಇಲ್ಲಿ ಹಾಗಾಗಲಿಲ್ಲ. ತನ್ನ ಸ್ಥಾನಕ್ಕೆ ಘಾತವಾಗುತ್ತಿದೆ ಎಂಬ ಎಚ್ಚರವು ಅದನ್ನುಳಿಸಿಕೊಳ್ಳಲು ಬೇಕಾಗಿ ಅಷ್ಟುದೂರದಿಂದ ಮುಖ್ಯಮಂತ್ರಿಗಳು ಓಡೋಡಿ ಬಂದರು ಎಂಬುದು ಜನರಿಗೆ ಗೊತ್ತಾಗಿದೆ. ಬಂದು ತಲುಪಿದ ಮುಖ್ಯಮಂತ್ರಿಗಳು, ಯಾರೇ ರಾಜೀನಾಮೆ ಕೊಟ್ಟರೂ ನಾನು ಕೊಡಲಾರೆ ಎಂದು ದೊಡ್ಡ ದನಿಯಲ್ಲಿ ಮಾತಾಡಿಬಿಟ್ಟರು! ಅಹ್ಹಹ್ಹಇದಿನ್ನೆಂಥಾ ಬಗೆಯ ವರಸೆ ನೋಡಿ! ಈ ಸರಕಾರ ಅಸ್ತಿತ್ವಕ್ಕೆ ಬಂದಾಗಿನಿಂದ ಇಂಥದ್ದನ್ನೆಲ್ಲಾ ನೋಡಿ ನೋಡಿ ರೋಸಿ ಹೋಗಿದೆ.

ತಮ್ಮ ರಾಜಕೀಯ ಜೀವನದ ಅರ್ಧ ಶತಮಾನದುದ್ದಕ್ಕೂ ಮೇಲೇರುವವರ ತಲೆ ಕುಟುಕಿ, ಕಾಲೆಳೆದು, ಸೊಂಟ ಮುರಿದು ಕುಟುಂಬ ರಾಜಕಾರಣ ಮತ್ತು ಕೇವಲ ಕುಟುಂಬ ರಾಜಕಾರಣ ಮಾತ್ರವನ್ನು ಮಾಡಿದರು ಎಂಬ ಆಪಾದನೆ ಮತ್ತು ಆರೋಪವನ್ನು ತಮ್ಮ ಪಕ್ಷದವರಿಂದಲೇ (ಈಗ ಪಕ್ಷ ಬಿಟ್ಟಿರುವ) ಹೊತ್ತಿರುವ ಮಾಜಿ ಪ್ರಧಾನಿ ದೇವೇಗೌಡರ ಎರಡನೆಯ ಪುತ್ರ ಕುಮಾರಸ್ವಾಮಿಗೆ ಪೂರ್ವಜನ್ಮದ ಸುಕೃತವೆಂಬಂತೆ ಮುಖ್ಯಮಂತ್ರಿಯ ಪಟ್ಟ ಸಿಕ್ಕಿದ್ದು ಎಂದು ರಾಜಕಾರಣದ ಯಾವ ಗಂಧವೂ ಇಲ್ಲದ ನನ್ನಂಥವರು ಭಾವಿಸುವುದು. ಈ ಪಟ್ಟವನ್ನು ಜನತೆಯು ಅವರಿಗೆ ಕೊಟ್ಟದ್ದಲ್ಲ. ಯಾವೊಬ್ಬ ರಾಜಕಾರಣಿಯೂ ಉದ್ಧಾರವಾಗದಂತೆ ಜೀವನಪೂರ್ತಿ ಹೆಚ್ಚಿನ ಕಾಲವನ್ನು ರಾಜಕೀಯದಲ್ಲಿ ಕಳೆಯುತ್ತಿರುವ ದೇವೇಗೌಡರು ಮಾಡಿಕೊಂಡು ಬಂದ ಜಾತಿ ರಾಜಕೀಯದ ಫಲಶ್ರುತಿಯಿಂದಲೂ ಒದಗಿದ್ದಲ್ಲ! ಹಾಗಾದರೆ ಹೇಗೆ ಸಿಕ್ಕಿರಬಹುದು ಅಂತ ತಲೆಬಿಸಿ ಮಾಡಿಕೊಳ್ಳುವಂಥ ಯಾವ ಮಣ್ಣಾಂಗಟ್ಟಿ ರಹಸ್ಯವೂ ಇದರಲ್ಲಿ ಇಲ್ಲ. ಎಲ್ಲರಿಗೂ ಗೊತ್ತಿರುವಂತೆ ಇದು ಕಾಂಗ್ರೆಸ್ಸಿನ ಕೃಪೆ, ಕೇವಲ ಕಾಂಗ್ರೆಸ್ಸಿನ ಕೃಪಾಕಟಾಕ್ಷ! ಅದೂ ತಮ್ಮ ಉಳಿವಿಗಾಗಿ ಕಾಂಗ್ರೆಸ್ಸು ಕೊಟ್ಟ ಕೃಪೆಯೇ ಹೊರತು, ಇದರಲ್ಲಿ ಯಾವುದೇ ದೊಡ್ಡತನದ ಔದಾರ್ಯವೇನಿಲ್ಲ. ಹೋದಲ್ಲಿ, ಬಂದಲ್ಲಿ ತನ್ನ ಜಾತಿಯವರನ್ನು ಒಟ್ಟುಗೂಡಿಸಿ ನಾನಿರದೆ ಹೋದರೆ ನಿಮಗೆ ಉಳಿಗಾಲವಿಲ್ಲವೆಂದು, ನೀವೆಲ್ಲ ಬೇರೆಯವರ ತಂತ್ರಕ್ಕೆ ಬಲಿಯಾಗಿ ನಾಶವಾಗಿ ಹೋಗುತ್ತೀರಿ ಎಂದು ಬ್ಲ್ಯಾಕ್ ಮೇಲ್ ತಂತ್ರ ಬಳಸಿ ಚುನಾವಣಾಯಲ್ಲಿ ಅಕ್ರಮವನ್ನೆಲ್ಲಾ ಮಾಡಿ ದುಡ್ಡು ಹಂಚಿ, ಹೆಂಡ ಸುರಿದು, ತನ್ನ ತಾಳಕ್ಕೆ ತಕ್ಕಂತೆ ಕುಣಿಯುವ ಸರಕಾರೀ ಅಧಿಕಾರಿಗಳನ್ನು ತನಗೆ ಬೇಕಾದಂತೆ ಬಳಸಿಕೊಂಡು ಸರ್ಕಾರಿ ರಕ್ಷಣೆಯಲ್ಲಿ ಏನೆಲ್ಲಾ ಭ್ರಷ್ಟಾಚಾರವನ್ನು ಮಾಡಲು ಸಾಧ್ಯವಿದೆಯೋ ಎಲ್ಲವನ್ನೂ ಮಾಡಿಯೂ, ತಾನು ಶುದ್ಧಹಸ್ತ ಎಂದುಕೊಳ್ಳುವ ಬದ್ಧ ವೈರಿ ರಾಜಕಾರಣಿಗಳು ಸೇರಿ ಮಾಡಿಕೊಂಡ ಈ ಸಮ್ಮಿಶ್ರ ಸರಕಾರದಿಂದ ಬೇರೆ ಏನು ಒಳ್ಳೆಯ ನಿರೀಕ್ಷೆ ಮಾಡಲು ಸಾಧ್ಯವಿದೆಯೆಂದು ಅನಿಸಿ ಸರಕಾರವನ್ನು ಜನರು ಮರೆತು ಬಿಟ್ಟಿದ್ದಾರೆ.

ಈ ಒಂದು ವರ್ಷದಲ್ಲಾದ ರಾಜಕೀಯ ಬೆಳವಣಿಗೆಗಳು ಸ್ಪಷ್ಟಪಡಿಸಿದ ಅಂಶಗಳಿಷ್ಟು: ರಾಜಕಾರಣದ ಘನತೆ ಮತ್ತು ಮೌಲ್ಯಗಳ ಅಧಃಪತನ, ಅಧಿಕಾರಕ್ಕಾಗಿ ಕಿತ್ತಾಟ, ಬ್ಲಾಕ್ ಮೇಲೆ ರಾಜಕೀಯ, ಅಪಾವಿತ್ರ್ಯ ರಾಜಕಾರಣ, ಸ್ವಾರ್ಥಲಾಲಸೆ, ಬೇಜವಾಬ್ದಾರಿತನ, ಅಸಮಾಧಾನ ಅತೃಪ್ತಿಯ ವಾತಾವರಣವನ್ನು ಸೃಷ್ಟಿಸುವ ಕುತಂತ್ರಗಳ ಪ್ರಯೋಗ, ಅಸಂಬದ್ಧ ಅನಾಗರಿಕ ಹೇಳಿಕೆಗಳು, ಕ್ಷೇತ್ರ ಕಡೆಗಣನೆ, ಮತದಾರರ ಬಗೆಗೆ ಉದಾಸೀನತೆ, ಎಲ್ಲೆಂದರಲ್ಲಿ ಉಢಾಫೆಯ ಹೇಳಿಕೆಗಳು, ಪಕ್ಷಸಿದ್ಧಾಂತಕ್ಕೆ ಧಿಕ್ಕಾರ, ಹಿರಿತನಕ್ಕೆ ಅವಮಾನ, ಮುಖ್ಯಮಂತ್ರಿ ಪದವಿಯಾದಿಯಾಗಿ ಮಂತ್ರಿಮಂಡಲದ ಕೆಲವು ಪದವಿಗಳ ಸ್ಥಾನಮೌಲ್ಯವನ್ನು ಕಳೆದದ್ದು ಬಿಟ್ಟರೆ ಯಾವ ರಾಜ್ಯಕ್ಕೆ ಹಿತವಾಗುವಂಥ ಬೆಳವಣಿಗೆಗಳು ಸಂಭವಿಸಲೇ ಇಲ್ಲ. ಸೋಷಿಯಲ್ ಮೀಡಿಯಾಗಳಲ್ಲಂತೂ ಮುಖ್ಯಮಂತ್ರಿ ಮತ್ತು ಮಂತ್ರಿಮಂಡಲವನ್ನು ಯಾವ ಯಾವ ನೆಲೆಯಲ್ಲಿ ಆಡಿಕೊಳ್ಳಲು ಸಾಧ್ಯವಿದೆಯೋ ಅದಷ್ಟೂ ನೆಲೆಯಲ್ಲಿ ಅಪಹಾಸ್ಯ, ವ್ಯಂಗ್ಯ, ವಿಡಂಬನೆ ಮಾಡುತ್ತಿರುವುದಂತೂ ಎಲ್ಲರಿಗೂ ಗೊತ್ತಿದೆ. ಜನಪ್ರತಿನಿಧಿಗಳು ಸ್ಪೀಕರ್ ಸ್ಥಾನಕ್ಕೂ ಅಗೌರವವಾಗಿ ನಡೆದುಕೊಂಡರು. ಮನಸಿಗೆ ಬಂದಂತೆ ವರ್ತಿಸೋದು, ಬಾಯಿಗೆ ಬಂದಂತೆ ಮಾತಾಡೋದು ಶುದ್ಧಾತಿಶುದ್ಧ ಅನಾಗರಿಕತೆಯನ್ನು, ಸಂಸ್ಕೃತಿಹೀನತೆಯನ್ನು ಅಭಿವ್ಯಕ್ತಿಸುತ್ತದೆ. ಹಲವು ಜನಪ್ರತಿನಿಧಿಗಳು ಇದಕ್ಕೂ ಕೆಳಮಟ್ಟದಲ್ಲಿ ಅಭಿವ್ಯಕ್ತಿಸಿದ್ದು ಮಾತ್ರ ಕರ್ನಾಟಕ ರಾಜಕಾರಣದ ಘೋರ ದುರಂತ.

ಗುಮಾನಿಯಿಂದ ಮೊದಮೊದಲು ನೋಡುತ್ತಿದ್ದ ಕರ್ನಾಟಕದ ರಾಜಕೀಯದ ನಾಟಕವನ್ನು ಈಗ ಕಳಪೆಯ ಮನರಂಜನೆಯಾಗಿ ನೋಡಬೇಕಾಗಿದೆ. ಜನತೆಯೂ ಇದನ್ನೆಲ್ಲಾ ತೀರಾ ಗಂಭೀರವಾಗಿ ಪರಿಗಣಿಸಿ ನೋಡಿದಂತಿಲ್ಲ. ಯಾಕೆಂದರೆ ರಾಜಕೀಯ ಮತ್ತು ರಾಜಕಾರಣಿ ಯಾವ ಮೌಲ್ಯವನ್ನೂ ಹಣ ಮತ್ತು ಅಧಿಕಾರದ ಹೊರತಾಗಿ ಉಳಿಸಿಕೊಳ್ಳಲಿಲ್ಲ, ಹಣದಿಂದ ಹುಟ್ಟುವ ಮೌಲ್ಯ ಅಥವಾ ಹುಟ್ಟಿಸಿಕೊಳ್ಳುವ ಮೌಲ್ಯ ಕೃತಕವೂ ತಾತ್ಕಾಲಿಕವೂ ಆಗಿರುತ್ತದೆ. ಈಗಲೂ ಈ ಸರಕಾರವನ್ನು ಉಳಿಸಲು ನೇರ ಮತ್ತು ವಾಮ ಮಾರ್ಗದ ಪ್ರಯತ್ನಗಳು ನಡೆಯುತ್ತಿದೆಯೇ ಹೊರತು ನೈತಿಕ ರಾಜಕಾರಣಕ್ಕಾಗಿ ಪ್ರಯತ್ನಗಳು ಆಗುತ್ತಿಲ್ಲ. ಅಧಿಕಾರ ಹೊಂದುವುದನ್ನೇ ನೈತಿಕ ರಾಜಕಾರಣವೆಂದು ಸರಿಹೊತ್ತಿನ ರಾಜಕೀಯ, ರಾಜಕಾರಣಿಗಳು ಭಾವಿಸಿದಂತಿದೆ. ತಾನೊಬ್ಬ ಸಂಖ್ಯಾಬಲಕ್ಕೆ ಪ್ರಮುಖ ಆಧಾರವೆಂದು ತಿಳಿದ ಶಾಸಕನ ತಲೆ ಮತ್ತು ಬಾಯಿ ಹದ್ದು ಮೀರಿ ವರ್ತಿಸುವುದರ ಪರಿಣಾಮವಾಗಿ ಇಂಥದ್ದೆಲ್ಲವೂ ಘಟಿಸುತ್ತಲೇ ಇರುತ್ತದೆ. ಒಂದು ವೇಳೆ ಎಲ್ಲಾ ಪ್ರಯತ್ನಗಳನ್ನೂ ಮಾಡಿ ಬಿದ್ದುಹೋಗುವ ಸರಕಾರವನ್ನು ಎತ್ತಿಹಿಡಿದು ನಿಲ್ಲಿಸಿ ಚಾಲನೆಯನ್ನು ಕೊಟ್ಟರೂ ಇದೊಂಥರಾ ಹರಿದು ಹಾಳಾದ ರೋಡಿಗೆ ತೇಪೆ ಹಾಕಿದಂತಾಗುತ್ತದೆ. ತೇಪೆ ಹಾಕಿದ ರೋಡು ಎಷ್ಟು ಸಮಯದವರೆಗೆ ಸರಿಯಿದ್ದೀತು ಹೇಳಿ. ಅದೂ ಸರಕಾರ ಹಾಕಿಸಿದ ತೇಪೆ! ಎಷ್ಟು ದಿನ ಬಾಳಿಕೆ ಬಂದೀತು?

ದೂರದರ್ಶನದಲ್ಲಿ ಪ್ರತಿದಿನವೂ ಬರುವ ನಾಟಕ, ಸೀರಿಯೆಲ್ಲುಗಳನ್ನು ಬೇಕಾದರೆ ನೋಡಬಹುದು, ಬೇಡವಾದರೆ ಬಿಡಲೂಬಹುದು. ಆದರೆ ಕಾಂಗ್ರೆಸ್ ಮತ್ತು ದಳದವರು ನಡೆಸುತ್ತಿರುವ ಈ ನಾಟಕ, ಸೀರಿಯಲ್ಲುಗಳನ್ನು ನೋಡದೆ ನಿರ್ಲಿಪ್ತವಾಗಿರಲು ಸಾಧ್ಯವಿಲ್ಲ. ಯಾಕೆಂದರೆ ಅಂಥ ತೇಪೆ ಹಾಕಿದ ರೋಡಿನಲ್ಲೇ ನಾವು ನಿತ್ಯವೂ ಚಲಿಸಬೇಕಾಗಿದೆ ಯಾವ ಸಕಾರಾತ್ಮಕವಾದ ಭ್ರಮೆಗಳನ್ನೂ ಭರವಸೆಗಳನ್ನೂ ಹುಟ್ಟಿಸದೇ ಹೋದರೂ! ಅವರಿಗಾದರೆ ಇದೊಂದು ವೈಯಕ್ತಿಕವಾದ ತೆವಲಾಗಿರಬಹುದು! ಆದರೆ ಜನರಿಗೆ ಹಾಗಲ್ಲವಲ್ಲ. ಯಾಕೆಂದರೆ ಇಂಥ ನಾಟಕ ಮತ್ತು ಸೀರಿಯೆಲ್ಲುಗಳನ್ನು ನೋಡುತ್ತಲೇ ಇರಬೇಕಾದುದರಿಂದ ಬೌದ್ಧಿಕ ಮತ್ತು ಮಾನಸಿಕವಾದ ಆರೋಗ್ಯವನ್ನು ನಾವು ಕಳೆದುಕೊಳ್ಳುವ ಭಯವಿರುತ್ತದೆ. ಆ ಭಯ ಅಂತ್ಯದಲ್ಲಿ ಎಲ್ಲವನ್ನೂ ಜುಗುಪ್ಸೆಯಿಂದ ನೋಡುವಂತೆಯೂ ಅಥವಾ ಉದ್ರೇಕಗೊಳಿಸುವಂತೆಯೂ ನಮ್ಮನ್ನು ದಾರಿ ತಪ್ಪಿಸಬಹುದು!

ಸಮ್ಮಿಶ್ರ ಸರಕಾರದಲ್ಲಿ ನಮಗೆ ಮೋಸವಾದದ್ದಂತೂ ನಿಜ. ಜನತೆಯ ಹಿತ ಈ ನಾಟಕದಲ್ಲಿ ಕಾಣುತ್ತಿಲ್ಲ. ರಾಜ್ಯದ ಹಿತವೂ ಗೋಚರಿಸುತ್ತಿಲ್ಲ. ಆದರೆ, ಕಳೆದ ವರ್ಷದಿಂದ ನೋಡುತ್ತಲೇ ಬಂದ ಈ ನಾಟಕವೊಂದಕ್ಕೆ ಇಷ್ಟು ದೊಡ್ಡ ರಿಹರ್ಸಲ್ಲುಗಳು ಊಹಿಸಿಕೊಂಡಂಥ ಪ್ರದರ್ಶನವನ್ನು ನೀಡಲೇ ಇಲ್ಲ! ಆದರೆ ಇಬ್ಬರಿಗೂ ಸುಸ್ತು ಹೊಡೆಸಿದ್ದಂತೂ ಹೌದೇ ಹೌದು. ಅಪ್ಪನೇ ಸೂತ್ರಧಾರನಾಗಿ ನಿಂತು ಮಕ್ಕಳಿಗೆ ಪಾತ್ರಗಳನ್ನು ಹಂಚಿ ನಡೆಸುತ್ತಿರುವ ಈ ನಾಟಕಕ್ಕೆ ಸ್ಟೇಜನ್ನು ಕೊಟ್ಟು ಆಯೋಜಿಸಿದವರು ಕಾಂಗ್ರೆಸ್ಸಿನವರು. ಆದರೆ, ಬನ್ನಿ ಎಂದು ಕರೆದ ಆಯೋಜಕರಲ್ಲೇ ಹೊಂದಾಣಿಕೆಯಿಲ್ಲದ ಅಪಸ್ವರ ನಾಟಕದ ಆರಂಭದಿಂದಲೂ ಇದೆ. ಅದೀಗ ತುರಿಯಾವಸ್ಥೆಯನ್ನು ಮುಟ್ಟಿದೆ. ಅಂದರೆ ನಾಟಕದ ಪಾತ್ರಧಾರಿಗಳಾಗುವ ಹುಮ್ಮಸ್ಸಿನ ಮನಸುಗಳು ನಾಟಕ ಆರಂಭದಿಂದ ನಾಟಕೀಯವಾಗಿ ವರ್ತಿಸುತ್ತಲೇ ಇವೆ. ನಾವು ಯಾಕೆ ಆಯೋಜಕರಾಗಿಯೂ ಪಾತ್ರಧಾರಿಗಳಾಗದೇ ವೇದಿಕೆಯನ್ನು ಬೇರೆಯವರಿಗೆ ಬಿಟ್ಟುಕೊಟ್ಟು ನಾಟಕವನ್ನು ಮಾತ್ರ ನೋಡಬೇಕು ಎಂಬುದರಲ್ಲಿ ಸತ್ಯವಿದೆ. ಆದರೆ ಈ ಸತ್ಯವು ವರಿಷ್ಠರಿಗೆ ಅರ್ಥವಾಗುವುದಿಲ್ಲ ಎಂಬುದು ಎಷ್ಟು ದೊಡ್ಡ ಸುಳ್ಳೋ ಅಷ್ಟೇ ದೊಡ್ಡ ಸುಳ್ಳು ಚುನಾವಣೋತ್ತರ ಅಪವಿತ್ರ ಮೈತ್ರಿಯ ಕಾರಣವಾಗಿ ಎರಡೂ ಪಕ್ಷಗಳಿಗೆ ಎಲ್ಲಾ ಗೊತ್ತಿದ್ದೂ ಏನೂ ಗೊತ್ತಿಲ್ಲದಂತೆ ನಡೆಸುತ್ತಿರುವ ಈ ಪ್ರಹಸನವು ನಾಟಕದ ರೂಪ ತಳೆದದ್ದು!

ಅನರ್ಹ ಮಕ್ಕಳನ್ನೂ, ಮೊಮ್ಮಕ್ಕಳನ್ನೂ ರಾಜಕೀಯಕ್ಕೆ ದೂಡಿ ಪಕ್ಷ ಎಂದರೆ ತಾನು, ತನ್ನ ಕುಟುಂಬ ಮಾತ್ರ ಎಂದು ಬಗೆದವರಿಗೆ ಬೇರೆ ಯಾವ ನಾಟಕವಾಡಲು ಬಂದೀತು? ಪ್ರಶ್ನಿಸಿದ ಪತ್ರಕರ್ತರಿಗೆ ಉಗುಳಿ, ಕಣ್ಣು ಕೆಂಪು ಮಾಡಿ, ಕೆಂಡ ಕಾರಿ, ಅಹಂಕಾರ, ಉಡಾಫೆ, ದರ್ಪ, ಅವಿನಯ, ಅವಿಧೇಯತೆಗಳನ್ನು ಅಭಿವ್ಯಕ್ತಿಸಿ, ತನಗೆ ಅಥವಾ ತನ್ನ ಮಕ್ಕಳಿಗೆ ಪ್ರತಿಸ್ಪರ್ಧಿಗಳಾಗಬಹುದು ಎಂದೆಣಿಸಿದ ಎಲ್ಲರನ್ನೂ ಪಕ್ಷದಿಂದ ಹೊರಹಾಕುವುದರಲ್ಲೇ ತನ್ನ ಬುದ್ಧಿವಂತಿಕೆಯನ್ನೆಲ್ಲ ಖರ್ಚು ಮಾಡಿ ವಿರೋಧಿಗಳನ್ನು ಹಣಿಯಲು ಮತ್ತು ಶತ್ರುಗಳೇ ಇನ್ನಿಲ್ಲದಂತೆ ಮಾಡಲು ಶತಗತ ಪ್ರಯತ್ನಿಸಿದವರ ಜೊತೆಗೂಡಿ ಪರಮಾಧಿಕಾರವನ್ನು ಅವರಿಗೇ ಕೊಟ್ಟು, ಕೋಲು ಕೊಟ್ಟು ಪೆಟ್ಟು ತಿಂದ ಅನುಭವವನ್ನು ಕಾಂಗ್ರೆಸ್ಸು ಅನುಭವಿಸುತ್ತಲೇ ಇದೆ. ಲೋಕ ಚುನಾವಣೆಯಲ್ಲಿ ಮೈತ್ರಿ ಮಾಡಿಕೊಂಡು ಹೀನಾಯ ಸೋಲನ್ನು ಅನುಭವಿಸಿದ ಕಾಂಗ್ರೆಸ್ಸಿಗೆ ಈಗ ಅಡಕತ್ತರಿಯಲ್ಲಿ ಸಿಕ್ಕಿಹಾಕಿಕೊಂಡಂಥ ಕೆಟ್ಟ ಅನುಭವ. ಪಕ್ಷದವರಿಂದಲೇ ಸರಕಾರವನ್ನು ಬೀಳಿಸುವ ಭಯ. ಆದರೆ, ಯಾರ ಮಾತುಗಳಿಗೂ ಜಗ್ಗದ ಬಂಡಾಯ ಶಾಸಕರು ರಾಜೀನಾಮೆ ನೀಡಿದ್ದು ಮಾತ್ರ ಕ್ಷೇತ್ರದ ಹಿತಕ್ಕಾಗಿಯಲ್ಲ, ರಾಜ್ಯದ ಅಭಿವೃದ್ಧಿಗಾಗಿಯಲ್ಲ. ಆದ್ದರಿಂದ ಈ ರಾಜೀನಾಮೆಗೆ ಅಂಥಾ ದೊಡ್ಡಮಟ್ಟದ ಬೆಂಬಲ ಜನರಿಂದ ಬರಲು ಸಾಧ್ಯವಿಲ್ಲ. ಇದೇ ಸಂದರ್ಭದಲ್ಲಿ ಮುಕ್ತ ಭ್ರಷ್ಟಾಚಾರದ ವಾಸನೆ ಸರಕಾರದ ಮೈತುಂಬಾ ಇದೆಯೆಂಬ ಸುದ್ದಿ ಮಾಧ್ಯಮಗಳಲ್ಲಿ ಕೇಳಿಬರುತ್ತಿದೆ.

ಈ ಮಧ್ಯೆ ಸ್ಪೀಕರ್ ನಡೆಯ ಬಗ್ಗೆಯೂ ಅಸಮಾಧಾನದ ಮಾತುಗಳು ಕೇಳಿಬರುತ್ತಿವೆ. ರಾಜೀನಾಮೆಯನ್ನು ಸ್ವ ಇಚ್ಛೆಯಿಂದ ಶಾಸಕರು ಕೊಟ್ಟಿದ್ದಾರೋ ಅಥವಾ ಯಾರಾದರೂ ಒತ್ತಡ ಹಾಕಿದ್ದಾರೋ ಎಂಬುದನ್ನಷ್ಟೆ ಖಚಿತಪಡಿಸಿಕೊಳ್ಳಬೇಕು. ಅದನ್ನು ಬಿಟ್ಟು ಸ್ಪೀಕರ್ ಯಾಕೆ ಹೀಗೆ ಮಾಡುತ್ತಿದ್ದಾರೆಂದು ಅಸಮಾಧಾನ ತೋರಿಸಿದವರು ಮಾಜಿ ಸ್ಪೀಕರ್ ಮಾನ್ಯ ಕೋಳಿವಾಡರು. ಬಂಡಾಯ ಶಾಸಕರು ನೇರವಾಗಿಯೇ ಮುಖ್ಯಮಂತ್ರಿಗಳ ಕಾರ್ಯವೈಖರಿ ಮತ್ತು ಪಕ್ಷಪಾತವನ್ನು ಖಂಡಿಸುತ್ತಾ ರಾಜೀನಾಮೆಯ ಉದ್ದೇಶವನ್ನು ಘಂಟಾಘೋಷವಾಗಿ ಹೇಳುತ್ತಿದ್ದಾರೆ. ಅತೃಪ್ತ ಶಾಸಕರನ್ನು ಮನವೊಲಿಸಲು ಡಿಕೆಶಿ ಮುಂಬಯಿಗೆ ಹೋದರೂ ಸಾಧ್ಯವಾಗದೆ ಅಲ್ಲೇ ಅವರನ್ನು ಬಂಧಿಸಲಾಯಿತು. ಕರ್ನಾಟಕದ ರಾಜಕಾರಣದಲ್ಲಿ ಹುಟ್ಟಿಕೊಂಡ ಸಾಂವಿಧಾನಿಕ ಬಿಕ್ಕಟ್ಟಿಗೆ ಸುಪ್ರೀಂಕೋರ್ಟಿನಲ್ಲೂ ದಾವೆಯನ್ನು ಹೂಡಲಾಗಿದೆ. ಇಂಥ ಬಿಕ್ಕಟ್ಟಿನ ಸಂದರ್ಭದಲ್ಲಿ ಘನತೆಯಿಂದ ವರ್ತಿಸಿ ಸಾಂವಿಧಾನಿಕವಾಗಿ ಪರಿಹಾರವನ್ನು ಕಂಡುಕೊಳ್ಳಲು ಸ್ಪೀಕರ್ ಪ್ರಯತ್ನಿಸಬೇಕಿತ್ತು. ಯಾಕೆಂದರೆ ಸ್ಪೀಕರ್‌ಗೆ ಇರುವ ಪರಮಾಧಿಕಾರವನ್ನು ಪ್ರಶ್ನಿಸಲು ಯಾರಿಗೂ ಹಕ್ಕಿಲ್ಲ. ಆದರೆ ಸ್ಪೀಕರ್ ಯಥೋಚಿತವಾಗಿ ನಡೆದುಕೊಳ್ಳಲಿಲ್ಲ ಎಂಬ ಆರೋಪ ಬೇಸರ ಕಾಂಗ್ರೆಸ್ಸಿನಲ್ಲೇ ಇದೆ. ತನ್ನ ಕಾರ್ಯಕ್ಷೇತ್ರದ ವ್ಯಾಪ್ತಿಯನ್ನು ಉಲ್ಲಂಘಿಸಿ ಸ್ಪೀಕರ್ ನಡೆಯಿದೆ ಎಂಬ ಆಪಾದನೆ ಮತ್ತು ಆರೋಪ ರಾಜಕೀಯ ವಲಯದಲ್ಲಿ ಹುಟ್ಟಿಕೊಂಡಿದೆ.

ಸ್ಪೀಕರ್‌ರನ್ನು ಆರೋಪಿಸಿ ಪ್ರಯೋಜನವಿಲ್ಲವೆಂದೇ ನನಗನಿಸುವುದು. ಯಾಕೆಂದರೆ, ದೇಶದಲ್ಲಿ ಇಂಥ ಘಟನೆಗಳು ನಡೆದಾಗ ಯಾವ ಶಾಸನಸಭೆಯ ಯಾವೊಬ್ಬ ಸ್ಪೀಕರ್ ಕೂಡ ಕಟ್ಟುನಿಟ್ಟಾಗಿ ನಿಯಮಗಳನ್ನು ಪಾಲಿಸಿದ ನಿದರ್ಶನಗಳಿವೆ ಹೇಳಿ? ಹೈಕೋರ್ಟ್ ಸುಪ್ರೀಂಕೋರ್ಟಿಗೂ ಇಲ್ಲದಂತಹ ಪರಮಾಧಿಕಾರವನ್ನು ಸಂವಿಧಾನವು ಸ್ಪೀಕರ್‌ಗೆ ನೀಡಿವೆ. ಆದರೆ, ಯಾವೊಬ್ಬ ಸ್ಪೀಕರ್ ಕೂಡ ಅದನ್ನು ಬಳಸಲಿಲ್ಲವಾದ್ದರಿಂದ ಶಾಸಕರ ಗೂಂಡಾ ವರ್ತನೆ ರೌಡಿಸಂ ದಾದಾಗಿರಿ ಒಳಗೂ ಹೊರಗೂ ನಡೆಯುತ್ತಲೇ ಇದೆ. ಪ್ರಜಾಪ್ರತಿನಿಧಿ ಕಾಯ್ದೆಯನ್ನು ಬಳಸಿ ಅಂಥ ಶಾಸಕರನ್ನು ನಿಗ್ರಹಿಸಿದ್ದರೆ ಇಂದು ಈ ಪ್ರಮಾಣದಲ್ಲಿ ಶಾಸಕರ ಆಟಾಟೋಪಗಳು ನಡೆಯುತ್ತಿರಲಿಲ್ಲ. ಅನಾಗರಿಗ ಅವಿದ್ಯಾವಂತ ಸಂಸ್ಕಾರ ಸಭ್ಯತೆಯಿಲ್ಲದವರೆಲ್ಲಾ ಶಾಸನ ಸಭೆಯನ್ನು ಪ್ರವೇಶಿಸಿರುವುದರಿಂದ ಸಂವಿಧಾನದ ಘನತೆ, ದೇಶದ ಘನತೆ ಗೌರವಗಳು ಮಣ್ಣುಪಾಲಾಗಿವೆ.

ಮೈತ್ರಿ ಸರಕಾರ ಈಗಲೂ ಮೋದಿಯನ್ನು ಬಿಜೆಪಿಯನ್ನು ದೂರುವುದರಲ್ಲೇ ನಿರತವಾಗಿದೆ. ಇವರಂಥಾ ಹೆಡ್ಡರು ಮೂರ್ಖರು ಯಾರಾದರೂ ಇರಲು ಸಾಧ್ಯವೆ? ಇವರುಗಳು ಮಾಡಿಕೊಂಡ ದುರಂತಕ್ಕೆ ಮೋದಿಯನ್ನು ಹೊಣೆಯಾಗಿಸುವ ದುಷ್ಟತನ ಈಗಲೂ ಬಿಡಲಿಲ್ಲ. ಹೀಗೆ ಮಾಡಿಯೇ ಲೋಕ ಚುನಾವಣೆಯಲ್ಲಿ ಹೀನಾಯ ಸೋಲುಂಡ ಇವರಿಗೆ ಇನ್ನೂ ಬುದ್ಧಿ ಬಂದಂತಿಲ್ಲ, ಬರುವುದೂ ಇಲ್ಲವೇನೋ! ಬಿಜೆಪಿಯೇತರ ಸರಕಾರ ಇತರ ರಾಜ್ಯಗಳಲ್ಲೂ ಇದೆ. ಅಲ್ಲೆಲ್ಲಾ ಯಾಕೆ ಈ ಪರಿಯ ಅದ್ವಾನಗಳಿಲ್ಲ ಎಂಬುದನ್ನೂ ಎರಡೂ ಪಕ್ಷಗಳು ಆಲೋಚಿಸಬೇಕಾಗಿದೆ. ಬಿಜೆಪಿಗೆ ಅಧಿಕಾರ ನಡೆಸಲು ಬಿಟ್ಟುಕೊಡಿಯೆಂದು ಕೋಳಿವಾಡರು ಹೇಳಿದ್ದರಲ್ಲಿ ಸತ್ಯವಿದೆ. ನಿರಂತರವಾಗಿ ಎರಡೂ ಪಕ್ಷಗಳ ಶಾಸಕರು ಲಜ್ಜೆಯನ್ನು ಬಿಡುತ್ತಿರುವುದು ನೋಡಿದರೆ ಲಜ್ಜೆಯೆಂಬ ಪದವೇ ಮೌಲ್ಯ ಕಳೆದುಕೊಳ್ಳುತ್ತಿದೆ. ಇನ್ನೊಂದು ಮಜಾ ಏನೆಂದರೆ ಇವರುಗಳೆಲ್ಲಾ ಬಿಜೆಪಿಯ ನೈತಿಕತೆಯ ಬಗ್ಗೆ ದೊಡ್ಡದೊಡ್ಡ ದನಿಯಲ್ಲಿ ಮಾತಾಡುವುದು. ಇದು ಹೇಗಿದೆಯೆಂದರೆ, ತನ್ನ ವೃತ್ತಿಯ ಬಗ್ಗೆ ವೇಶ್ಯೆಯೂ ನಾಚಿಕೊಳ್ಳುವಷ್ಟು!

ಏನಕೇನ ಪ್ರಕಾರೇಣ ಸದ್ಯ ಬಿಜೆಪಿ ಅಧಿಕಾರಕ್ಕೆ ಬರುವುದು ಸರಿಹೊತ್ತಿನಲ್ಲಿ ಉಚಿತವಾಗಿ ಕಾಣುವುದಿಲ್ಲ. ಯಾಕೆಂದರೆ ಆಪರೇಷನ್ ಕಮಲ ಎಂಬ ಹಿಂದಿನ ಬಿರುದು ಅದಕ್ಕೆ ಅಂಟಿಕೊಂಡೇ ಇದೆ. ಈಗ ಅಧಿಕಾರಕ್ಕೆ ಬಂದರೆ ಆ ಬಿರುದು ಶಾಶ್ವತವಾಗಿ ಬಿಜೆಪಿಯನ್ನು ಬಿಡದು, ಹೇಗೆಂದರೆ ಜೆಡಿಎಸ್ಸಿಗೆ ವಚನಭ್ರಷ್ಟ ಎಂಬ ಬಿರುದಿದ್ದಂತೆ. ಹಾಗಾಗಿ ಬಿಜೆಪಿ ತನಗಿರುವ ಎರಡು ಆಯ್ಕೆಗಳಲ್ಲಿ ಚುನಾವಣೆಯನ್ನು ಆಯ್ದುಕೊಳ್ಳುವುದು ಸೂಕ್ತವಾದರೂ ಜನತೆಗೆ ಅದು ಮಾರಕವಾಗಿ ಆರ್ಥಿಕ ಸ್ಥಿತಿಗೆ ಹಿನ್ನಡೆಯಾಗುತ್ತದೆ. ಮೇಲಾಗಿ ಜನತೆಗೆ ಅದು ಇಷ್ಟವಾದ ವಿಚಾರವೂ ಆಗಿಲ್ಲ. ಮೈತ್ರಿಯೇ ಮುರಿದು ಬಿದ್ದು ರಾಜ್ಯಪಾಲರು ಸರಕಾರ ರಚನೆಗೆ ಕರೆದಾಗ ಮಾತ್ರ ಬಿಜೆಪಿ ಒಂದು ಪ್ರಯತ್ನವನ್ನು ಮಾಡಬೇಕು. ಅದೂ ಸಾಧ್ಯವಾಗದಿದ್ದರೆ ಆರು ತಿಂಗಳೋ ವರ್ಷವೋ ಎಂಬ ನೆಲೆಯಲ್ಲಿ ರಾಜ್ಯಪಾಲರ ಆಡಳಿತವಾದರೂ ಉಚಿತವೆನಿಸುತ್ತದೆ. ಜನರಿಂದ ಆಯ್ಕೆಯಾದ ಪ್ರತಿನಿಧಿಗಳಿಗೆ ಐದು ವರ್ಷ ಕ್ಷೇತ್ರದ ಅಭಿವೃದ್ಧಿಯ ಕುರಿತಾಗಿ ಚಿಂತಿಸುವ ವ್ಯವಧಾನ ಕಿಂಚಿತ್ ಇಲ್ಲದಿರೆ ಅವರೆಂಥಾ ಅಯೋಗ್ಯರಿರಬಹುದು! ರಾಜೀನಾಮೆಯ ನಾಟಕ ಆಯ್ಕೆ ಮಾಡಿದ ಜನರಿಗೆ ಅಪಮಾನವಲ್ಲವೆ? ಇಂಥ ಅಯೋಗ್ಯರಿರುವುದಕ್ಕಿಂತ ರಾಜ್ಯಪಾಲರ ಆಡಳಿತವೇ ಸೂಕ್ತವೆನಿಸುತ್ತದೆ. ಆಕಸ್ಮಾತ್ ಚುನಾವಣೆಯೇ ನಿಶ್ಚಿತವೆಂದಾದರೆ ಬಿಜೆಪಿಗೆ ಗೆಲುವು ನಿಶ್ಚಿತವೆಂಬುದಕ್ಕೆ ಯಾವುದೇ ಬಹಿರಂಗವಾದ ರಾಜಕೀಯ ವಿಶ್ಲೇಷಣೆಯ ಅಗತ್ಯವೇ ಬೀಳುವುದಿಲ್ಲ. ಯಾವ ಜ್ಯೋತಿಷಿಯೂ ಬಾಯಿ ಬಿಡುವ ಅಗತ್ಯವಿಲ್ಲ. ಫಲಜ್ಯೋತಿಷ್ಯ, ದಿನಜ್ಯೋತಿಷ್ಯದ ಅಗತ್ಯವಂತೂ ಇಲ್ಲ. ಯಾವ ದೇವರಲ್ಲಿ ಹರಕೆ, ಯಾಗ, ಯಜ್ಞವನ್ನು ಮಾಡಿಸಿ ಉರುಳುಸೇವೆ ಗೈದರೂ, ಜಗದ್ಗುರುಗಳ ಪಾದಪೂಜೆ ಧನಕನಕಗಳನ್ನು ಸುರಿದರೂ ಕಾಂಗ್ರೆಸ್ ಮತ್ತು ದಳಕ್ಕೆ ಗೆದ್ದು ಬರುವ ಅವಕಾಶ ಕಡಿಮೆಯೇ. ಎಷ್ಟು ನಿಂಬೆಹಣ್ಣು ಮಂತ್ರಿಸಿದರೂ ಪ್ರಯೋಜನವಾಗಲಾರದು. ಅದೂ ಕೂಡ ಲೋಕ ಚುನಾವಣೆಯ ಅನುಭವವನ್ನೇ ಎರಡೂ ಪಕ್ಷಗಳಿಗೂ ನೀಡೀತು.

ಕೃಷ್ಣನಿಗೆ, 'ಮರುಳು ಮಾಧವ ಮಹಿಮ ರಾಜ್ಯದ ಸಿರಿಗೆ ಸೋಲುವವ ನಾನಲ್ಲ' ಎಂದ ಕರ್ಣನಂತೆ ತಾನೂ ಆಗಬಹುದೆಂದು ಭಾವಿಸಿ ಕುಮಾರಸ್ವಾಮಿ ಪೀಠ ಬಿಟ್ಟು ಕೆಳಗಿಳಿದರೆ ಕರ್ಣನಾಗಲು ಸಾಧ್ಯವಿಲ್ಲ. ಯಾಕೆಂದರೆ, ಪೀಠ ಬಿಡಲು ಕೇಳಿದವರು ಕೃಷ್ಣನಲ್ಲ. ಕೊಟ್ಟವರೂ ಕೃಷ್ಣನಂಥವರಲ್ಲ. Politics is the last resort of the scoundrels ಎನ್ನುವ ವಾಕ್ಯದಲ್ಲಿ ಲಾಸ್ಟ್ ಬದಲಿಗೆ ಫಸ್ಟ್ ಎಂದು ಬದಲಿಸಬೇಕಿದೆ. ದೊಡ್ಡ ದೊಡ್ಡ ರಾಜಕಾರಣಿಗಳ (ಮಂತ್ರಿಗಳಾಗಿದ್ದವರು) ಮಕ್ಕಳು ರಾಜಕಾರಣಕ್ಕೆ ಬರುತ್ತಿರುವುದನ್ನು ನೋಡಿದರೆ ಇದು ಲಾಸ್ಟ್ ಅಲ್ಲ, ಫಸ್ಟ್ ಎನಿಸದಿರದು. ಜನಾಭಿಪ್ರಾಯದ ಮೇಲೆ ಆಯ್ಕೆಯಾದವರು ಜನರ ಅನುಮತಿಯಿಲ್ಲದೆ ರಾಜೀನಾಮೆ ನೀಡುವುದು ಬೇಜವಾಬ್ದಾರಿ, ಹೊಣೆಗೇಡಿತನದ ಕೊನೆಯ ಸ್ಥಿತಿಯನ್ನು ತಲುಪಿದ ಮೇಲೆಯೇ. ಸಂವಿಧಾನ, ಸರಕಾರ, ಕಾನೂನು, ನಿಯಮಗಳು, ಪಕ್ಷನಿಷ್ಠೆ, ಪದವಿ ಸ್ಥಾನಮಾನ, ಜನತೆಯ ಕಾಳಜಿ, ಹುದ್ದೆಯ ಗೌರವದ ಬಗ್ಗೆ ಸಾಮಾನ್ಯ ಜ್ಞಾನವೂ ಇಲ್ಲದ ಅಯೋಗ್ಯರು ಜನಪ್ರತಿನಿಧಿಗಳಾದರೆ ಏನೇನು ಅವಾಂತರಗಳು ಘಟಿಸುತ್ತವೆ ಎಂಬುದಕ್ಕೆ ಕರ್ನಾಟಕದ ರಾಜಕಾರಣದ ಪಲ್ಲಟಗಳು ಸಾಕ್ಷಿ.

ಎಲ್ಲಾ ಪಕ್ಷದ ವರಿಷ್ಠರು ಕಲಿಯಬೇಕಾದ ದೊಡ್ಡ ಪಾಠವೊಂದಿದೆ. ತಾನು ಮಾತ್ರ ಸದಾಕಾಲವೂ ಉನ್ನತ ಹುದ್ದೆಯಲ್ಲೇ ವಿರಾಜಿಸುತ್ತಿರಬೇಕು ಎಂಬ ಮಹತ್ವಾಕಾಂಕ್ಷೆಯಿಂದ ಕೆಳಗಿಳಿದು ಅರ್ಹರನ್ನು ಗುರುತಿಸಿ ಬೆಳೆಸಬೇಕೆಂದು. ಅಂತೂ ಕೊನೆಯಲ್ಲಿ ಕಾಂಗ್ರೆಸ್ಸಿಗೆ ಆದ ಅವಮಾನ, ಬೇಸರ, ನೋವು, ಮಾನಸಿಕ ಹಿಂಸೆಗೆ ಮದ್ದು ಖಂಡಿತಾ ಸಿಗಲಾರದು. ಕರೆದು ಆಲಿಂಗನ ಮಾಡಿಕೊಂಡ ತಪ್ಪಿಗೆ ಈಗ ಪಡಬಾರದ ಕಷ್ಟವನ್ನು ಅನುಭವಿಸಬೇಕಾಗಿದೆ. ಅಲ್ಲಿ ಮೇಲೆ ನೋಡಿದರೆ ಯಾವ ಲೀಡರು ಕಾಣುತ್ತಾ ಇಲ್ಲ, ಇಲ್ಲಿ ಎಲ್ಲರೂ ಲೀಡರುಗಳಂತೆ ಪೋಸು ಕೊಡುತ್ತಾ ಯಾರು ಯಾರ ಮಾತನ್ನು ಕೇಳುವ ಸ್ಥಿತಿಯಲ್ಲಿ ಇಲ್ಲ, ದಳದೊಂದಿಗೆ ಮಾಡಿಕೊಂಡ ಈ ಮೈತ್ರಿಯೇ ಎಲ್ಲಕ್ಕೂ ಕಾರಣವೆಂಬುದು ಅಳುಕ್ಕಿಳಿದರೆ ಗೊತ್ತಾಗುತ್ತದೆ. ಬಂಡಾಯ ಶಾಸಕರು ಯಾರ ಮಾತಿಗೂ ಹಿಂದೆ ಸರಿಯುತ್ತಿಲ್ಲ, ಸಿದ್ದರಾಮಯ್ಯನವರನ್ನು ಮತ್ತೆ ಸಿಎಂ ಮಾಡೋ ನಾಟಕಕ್ಕೆ ಇಷ್ಟೊಂದು ದೊಡ್ಡ ರಿಹರ್ಸಲ್ಲು ಬೇಕಿತ್ತೇ? ಕಾಂಗ್ರೆಸ್ಸು ಮತ್ತು ದಳಕ್ಕಿರುವ ಸಾಮಾನ್ಯ ಗುಣವೆಂದರೆ ನಾರ್ಸಿಸಸ್. ಇದು ಬಿಜೆಪಿಯಲ್ಲೂ ಇದೆ. ಆದರೆ ರೋಗವಾಗುವಷ್ಟು ಬೆಳೆದಿಲ್ಲ. ಇದು ಜನರಿಗೂ ಹರಡಬಹುದಾದ ಸಾಧ್ಯತೆಯುಳ್ಳ ಸಾಂಕ್ರಾಮಿಕವಾದ ರೋಗ. ಆದ್ದರಿಂದ ನಾವು ಬಹು ಜಾಗ್ರತೆಯಲ್ಲಿ ಈ ನಾಟಕವನ್ನು ಮನರಂಜನೆಯಾಗಿ ನೋಡಬೇಕೆ ಹೊರತು ಅದರಲ್ಲೇ ಮೈಮರೆಯಬಾರದು. ನಾವೂ ರಾಜಕಾರಣಿಗಳಂತೆ ನಮ್ಮ ಚಿಂತನೆ, ಮಾತು, ಕ್ರಿಯೆಯಲ್ಲಿ ಕಾಠಿಣ್ಯವನ್ನು ಹದವಾದ ಪ್ರಮಾಣದಲ್ಲಿ ಉಳಿಸಿಕೊಳ್ಳದೇ ಹೋಗಬಾರದು.

ಕೊನೆಯ ಮಾತು: ಎರಡೂ ಪಕ್ಷಗಳು ಆತ್ಮಾನುರಕ್ತಿಯನ್ನು ಬದಿಗೊತ್ತಿ ಈ ನಾಟಕವನ್ನು ಮಂಗಲಗೊಳಿಸಿದರೆ ಒಳಿತು. ಇಲ್ಲವಾದರೆ, ಸರಕಾರವನ್ನು ರಾಜ್ಯದ ಹಿತವನ್ನು ಕಾಯುವಲ್ಲಿ ಮುನ್ನಡೆಸಲು ಗಟ್ಟಿ ತೀರ್ಮಾನ ಮಾಡಿದರೆ ಒಳಿತು. ಹೇಗಾದರೂ ಸರಕಾರವನ್ನು ಉಳಿಸಿಕೊಳ್ಳುವ ಪ್ರಯತ್ನದಲ್ಲಿ ಎರಡೂ ಪಕ್ಷಗಳೂ ಇವೆ. ಆದರೆ ದರ್ದು ಮಾತ್ರ ಜೆಡಿಎಸ್ಸಿಗೇ ಹೆಚ್ಚಿದಂತೆ ಕಾಣುತ್ತದೆ. ಸಿದ್ಧಾಂತಗಳನ್ನೆಲ್ಲಾ ಮೂಲೆಗೊತ್ತಿ ಒಂದಾದವರಿಗೆ ಅಧಿಕಾರವೊಂದೇ ಪ್ರಧಾನ ಸಿದ್ಧಾಂತ! ಆ ಸಿದ್ಧಾಂತದಲ್ಲಿ ಗಾಂಧಿ, ಲೋಹಿಯಾ, ಜೆಪಿ ಕಾಣಿಸುವುದಿಲ್ಲ. ಯಾವ ವಾದವೂ ದೊಡ್ಡದಾಗುವುದಿಲ್ಲ. ಏನೇ ಆದರೂ ಕ್ಯಾರ್ ಮಾಡದಿರುವವವರಿಗೆ ಸಿದ್ಧಾಂತಗಳೆಲ್ಲಾ ಚುನಾವಣೆಯಲ್ಲಿ ಜನರ ಕಣ್ಣಿಗೆ ಮಣ್ಣೆರೆಚುವುದಕ್ಕೆ ಮಾತ್ರ! ಗೆದ್ದಮೇಲೆ ಅಧಿಕಾರವೊಂದೇ ಪರಮ ಸಿದ್ಧಾಂತ ಮೂರೂ ಬಿಟ್ಟವರಿಗೆ!

# ನಾವು ಭಗವಂತನಿಗೆ ಏನು ಕೊಡಬಹುದು, ಹೇಗೆ ಕೊಡಬಹುದು?

**ಕ್ಷಣ ಹೊತ್ತು ಆಣಿ ಮುತ್ತು**



**ಎಸ್.ಷಡಕ್ಷರಿ**

vveditoped@gmail.com

ತಾವು ಉಂಡು ಉಟ್ಟರೆ ಸಾಕು, ಬಡವರಿಗೇಕೆ ಕೊಡಬೇಕು ಎನ್ನುವ ಮನೋಭಾವದವರನ್ನು ನಾವೆಲ್ಲಾ ಕಂಡಿದ್ದೇವಲ್ಲವೇ? ನಮ್ಮದೂ ಅದೇ ಮನೋಭಾವ ಅಲ್ಲದಿದ್ದರೆ ಇಲ್ಲಿರುವ ಕತೆಯನ್ನು ಓದಬೇಕು.

ಒಂದೂರು. ಅಲ್ಲೊಬ್ಬ ಸಿರಿವಂತರು. ಭವ್ಯ ಭವನ, ಎಣಿಸಲಾಗದಷ್ಟು ಧನ, ವೈಭವೋಪೇತ ಜೀವನ. ಆದರೆ ಯಾರಿಗೂ ಒಂದು ಚಿಕ್ಕಾಸೂ ದಾನ ಮಾಡುವವರಲ್ಲ. ತಾವು ಉಂಡುಟ್ಟರೆ ಸಾಕು, ಬಡವರಿಗೇಕೆ ಕೊಡಬೇಕು? ಅವರವರ ಕರ್ಮ ಅವರು ಅನುಭವಿಸಬೇಕು! ಎನ್ನುವ ಮನೋಭಾವ. ಹೀಗೆಯೇ ಬದುಕಿದವರು. ಎಲ್ಲರಿಗೂ ಆಗುವಂತೆ ಅವರಿಗೂ ವಯಸ್ಸಾಯಿತು. ಇನ್ನು ಹೆಚ್ಚು ದಿನ ಬದುಕುವುದಿಲ್ಲವೆಂದು ಅನಿಸುತ್ತಿತ್ತು.

ಒಮ್ಮೆ ಅವರಿಗೆ ತಾವು ಸತ್ತು ಬೇರಾವುದೋ ಚಿತ್ರವಿಚಿತ್ರ ಲೋಕಕ್ಕೆ ಹೋದಂತೆ ವಿಚಿತ್ರ ಕನಸು ಬಿತ್ತಂತೆ. ಅಲ್ಲಿ ಅವರು ಗೊತ್ತುಗುರಿಯಿಲ್ಲದೆ ಸುತ್ತಾಡುತ್ತಿರುವಾಗ ಯಕ್ಷಪುರುಷನೊಬ್ಬ ಅವರಿಗೆ ಕಾಣಿಸಿಕೊಂಡ. ಇವರು ಆತನನ್ನು ಇದು ಎಂಥಾ ಲೋಕವಯ್ಯಾ? ನಾನೇಕೆ ಇಲ್ಲಿ ಬಂದೆನಯ್ಯಾ? ಎಂದು ಕೇಳಿದರು. ಆತ ಇದು ಭೂಲೋಕದವರೆಲ್ಲ ಸತ್ತಮೇಲೆ ಬಂದು ಸೇರುವ ಲೋಕ. ಅವರು ಚಿರಕಾಲ ಬಾಳುವ ಮನೆಗಳಿರುವ ಲೋಕ ಎಂದ.

ಶ್ರೀಮಂತರು ಕುತೂಹಲದಿಂದ ಹಾಗಾದರೆ ಇಲ್ಲಿ ನನ್ನ ಮನೆ ಎಲ್ಲಿದೆ? ಎಂದು ಕೇಳಿದರು. ಆತ ಅವರನ್ನು ಕರೆದುಕೊಂಡು ಹೊರಟ. ದಾರಿಯಲ್ಲಿ ವಿಶಾಲವಾದ ರಸ್ತೆಗಳು, ಉದ್ಯಾನವನಗಳು, ಭವ್ಯ ಭವನಗಳು ಇದ್ದವು. ಶ್ರೀಮಂತರಿಗೆ ಒಳಗೊಳಗೆ ನನ್ನ ಮನೆ ಇಲ್ಲೇ ಇರಬಹುದೆಂಬ ಆನಂದವಾಗುತ್ತಿತ್ತು.

ಆದರೆ ಯಕ್ಷಪುರುಷ ಅವರನ್ನು ಒಂದು ಕೊಳಗೇರಿ ಪ್ರದೇಶಕ್ಕೆ ಕರೆದೊಯ್ದ. ಅಲ್ಲಿದ್ದ ಅರ್ಧಂಬರ್ಧ ಕಟ್ಟಿದ, ವಾಸಕ್ಕೆ ಯೋಗ್ಯವಲ್ಲದ ಒಂದು ಸಣ್ಣ ಮನೆಯನ್ನು ತೋರಿಸಿ ಇದು ನಿಮ್ಮ ಮನೆ ಎಂದ. ಶ್ರೀಮಂತರಿಗೆ ಆಘಾತವಾಯಿತು. ಭೂಲೋಕದಲ್ಲಿ ಭಗವಂತ ನನಗೆ ದೊಡ್ಡ ಭವನ, ಬೇಕಾದಷ್ಟು ಧನ, ವೈಭವೋಪೇತ ಜೀವನ ಕೊಟ್ಟಿದ್ದ. ಈಗ ಇಲ್ಲಿ ಇಂತಹ ಅರೆಬರೆ ಕಟ್ಟಿದ ಮನೆ ಏಕೆ ಕೊಡುತ್ತಿದ್ದಾನೆ ಎಂದು ಪ್ರಶ್ನಿಸಿದ.

ಯಕ್ಷಪುರುಷ ಭೂಲೋಕದಲ್ಲಿ ಭಗವಂತ ನಿಮಗೆ ಎಲ್ಲವನ್ನೂ ಕೊಟ್ಟಿದ್ದ. ನೀವು ಭಗವಂತನಿಗೇನು ಕೊಟ್ಟಿರಿ? ಅಲ್ಲಿ ಅವನಿಗೇನಾದರೂ ಕೊಟ್ಟಿದ್ದರೆ, ಅದು ಇಲ್ಲಿ ನಿಮ್ಮ ಮನೆ ಕಟ್ಟಲು ಬಳಕೆಯಾಗುತ್ತಿತ್ತು ಎಂದ. ತಕ್ಷಣ ಶ್ರೀಮಂತ ನಾವು ಭಗವಂತನಿಗೆ ಏನು ಕೊಡಬಹುದಿತ್ತು? ಹೇಗೆ ಕೊಡಬಹುದಿತ್ತು? ಎಂದರು.

ಯಕ್ಷ ಪುರುಷ ನೀವು ಭೂಲೋಕದಲ್ಲಿ ಬಡವರಿಗೆ ಏನೆಲ್ಲ ದಾನ-ಧರ್ಮ ಮಾಡುತ್ತೀರೋ, ಸಹಾಯ ಮಾಡುತ್ತೀರೋ ಅದನ್ನೆಲ್ಲ ಭಗವಂತ ನಿಮ್ಮ ಖಾತೆಗೆ ಸೇರಿಸುತ್ತಾನೆ. ಅದನ್ನೇ ಬಳಸಿ ನಿಮ್ಮ ಇಲ್ಲಿನ ಮನೆಯನ್ನು ಕಟ್ಟುತ್ತಾನೆ ಎಂದರು. ಶ್ರೀಮಂತ ತಕ್ಷಣ ಛೇ! ಇದು ಗೊತ್ತಿದ್ದರೆ, ನಾನು ಬಡವರಿಗೆ ಸಾಕಷ್ಟು ದಾನ ಮಾಡುತ್ತಿದ್ದೆ. ಯಾರಿಗೂ ದಾನ ಮಾಡದೆ ಎಂತಹ ತಪ್ಪು ಮಾಡಿದೆ? ಎಂದು ಹಣೆಯನ್ನು ಜೋರಾಗಿ ಚಚ್ಚಿಕೊಂಡ. ಹಣೆಗೆ ನೋವಾಯಿತು. ನೋವಿನಿಂದ ಆತನಿಗೆ ಎಚ್ಚರವಾಯಿತು. ಓಹ್! ಎಂಥಾ ಕನಸಯ್ಯಾ, ಇದು ಎಂಥಾ ಕನಸು! ಪಾಠ ಕಲಿಸಿದ ಕನಸು! ಎನ್ನುತ್ತಾ ಮೇಲಕ್ಕೆದ್ದ.

ಅಂದಿನಿಂದ ಆತನ ಬದುಕಿನ ಶೈಲಿಯೇ ಬದಲಾಯಿತು. ಧಾರಾಳವಾಗಿ ದಾನ ಧರ್ಮ ಮಾಡತೊಡಗಿದ. ಎಲ್ಲರಿಗೂ ಸಹಾಯ ಮಾಡುತ್ತಿದ್ದ. ಏಕೆಂದರೆ ಇಲ್ಲಿ ಬಡವರಿಗೆ ಕೊಡುವ ಹಣ ಭಗವಂತನಿಗೆ ಸೇರುತ್ತದೆ. ಅದು ಅಲ್ಲಿ ನಮ್ಮನೆ ಕಟ್ಟಲು ಬಳಕೆಯಾಗುತ್ತದೆಂಬುದು ಆತನಿಗೆ ಗೊತ್ತಾಗಿತ್ತು.



ಈಗ ನಮಗೆ ಈ ಕತೆ ಅರ್ಥಪೂರ್ಣವೆನಿಸಿದರೆ, ದಾನ-ಧರ್ಮ ಮಾಡೋಣ! ಅರ್ಥಗಳಿಕೆ ಒಂದೇ ನಮ್ಮ ಪೂರ್ಣಕತೆಯಾದರೆ ನಮಗಿಷ್ಟ ಬಂದಂತೆ ಮಾಡೋಣ! ನಮಗೆ ಸಿಕ್ಕಿದ್ದನ್ನು ಇಲ್ಲಿಯೇ ಅನುಭವಿಸಬಹುದು! ಅಲ್ಲಿ ಸಿಗುತ್ತದೆಯೋ ಇಲ್ಲವೋ, ಅದರ ಚಿಂತೆಯನ್ನೂ ಮಾಡಬಹುದು!